ನೀರಾವರಿ ಪ್ರದೇಶದಲ್ಲಿರತಕ್ಕ ಈ ಚಿಕಿತ್ಸಾ ಕೇಂದ್ರಗಳಿಗೆ ತಾವು ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಅಲ್ಲಿ ಧನಗಳ ಸಂಖ್ಯೆ ಜಾಸ್ತಿ ಇರುವುದರಿಂದ ಔಷಧಿಗಳೂ ಸಹ ಆಷ್ಟೇ ಜಾಸ್ತಿ ಬೇಕಾಗುತ್ತದೆ. ಇದನ್ನು ತಾವು ಪರಿಶೀಲನೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ನಾನು ಆಲೋಚನೆ ಮಾಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರೋಜ್‌ಗಾರ್ ಯೋಜನೆ

೧೩೪. ಶ್ರಿ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾರ್ಚ್ ೧,೧೯೯೦ರವರೆಗೆ ರೋಜ್‌ಗಾರ್ ಯೋಜನೆ ಯಡಿಯಲ್ಲಿ ಖರ್ಚು ಮಾಡಲಾದ ಹಣ ಪೈಸ್ಟು?

ಆ) ಯಾವ ಮಂಡಲದಲ್ಲಿ ಅತಿ ಕಡಿಮೆ ಹಣ ಖರ್ಚು ಮಾಡಲಾಗಿದೆ?

ಇ) ಯಾವ ಮಂಡಲದಲ್ಲಿ ಅತಿ ಹೆಚ್ಚು ಹಣ ಖರ್ಚು ಮಾಡಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನ ಮಂತ್ರಿಗಳು).—

ಅ) ೭೯.೯೬ ಲಕ್ಷ ರೂ.ಗಳು (೧೯೯೦ರ ಫೆಬ್ರವರಿ ಅಂತ್ಯದವರೆಗೆ)

ಆ) ಕುಮಟಾ ತಾಲ್ಲೂಕು — ಹೆಗಡೆ ಮಂಡಲ
ಸಿರ್ಸಿ ತಾಲ್ಲೂಕು — ಸುಗಾವಿ ಮಂಡಲ
ಮುಂಡಗೋಡ ತಾಲ್ಲೂಕು — ಚಿಗಳ್ಳಿ ಮಂಡಲ

ಇ) ಹೊನ್ನಾವರ ತಾಲ್ಲೂಕು — ಹೆರೆಂಗಡಿ ಮಂಡಲ

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಈ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಸರಿಯಾಗಿ ಹಣ ಕೊಟ್ಟಿದ್ದರೂ ಸಹ, ಕೆಲಸ ಮಾಡದಿರುವಂಥ ಮಂಡಲಗಳು ಏನಿದ್ದಾರೆ, ಅಂಥ ಮಂಡಲಗಳು ನಿಷ್ಕ್ರಿಯ ಮಂಡಲಗಳಾಗಿದ್ದು, ಜನಗಳಿಗೆ ಅವುಗಳಿಂದ ಪ್ರಯೋಜನ ಇಲ್ಲ ಎನ್ನುವುದನ್ನು ತಾವು ಮನವರಿಕೆ ಮಾಡಿಕೊಂಡು ಅಂಥ ಮಂಡಲಗಳನ್ನು ವೈಂಡಪ್ ಮಾಡಿ, ಅಲ್ಲಿಗೆ ಅಧಿಕಾರಿಗಳನ್ನು ನೇಮಿಸಿ, ಈ ಕೆಲಸವನ್ನು ಅಧಿಕಾರಿಗಳಿಂದಲೇ ಮಾಡಿಸುವುದಕ್ಕೆ ಸರ್ಕಾರ ತಯಾರಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಆತಂಕ ನಿಜ. ನಾವು ಉತ್ತರ ಕನ್ನಡ ಜಿಲ್ಲೆಗೆ ಈ ವರ್ಷ ೧೬೮.೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಸಹ ಅದರಲ್ಲಿ ಕೇವಲ ೭೯.೯೬ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ೧೨೦ ಮಂಡಲಗಳು ಇವೆ, ೮೯-೯೦ನೇ ಸಾಲಿನಲ್ಲಿ ೧೬೬.೭೩ ಲಕ್ಷ ಹಣ ಕೊಟ್ಟಿದ್ದರೆ, ಅದರಲ್ಲಿ ಕೇವಲ ೪೩ ಲಕ್ಷ ಮಾತ್ರ ಖರ್ಚು ಮಾಡಿದ್ದಾರೆ. ಕುಮಟಾ ತಾಲ್ಲೂಕಿಗೆ ೧ ಲಕ್ಷದ ೪೧ ಸಾವಿರ ಕೊಡಲಾಗಿತ್ತು, ಸಿರಸಿ ತಾಲ್ಲೂಕಿಗೆ ೧ ಲಕ್ಷದ ೧೮ ಸಾವಿರ ಕೊಡಲಾಗಿತ್ತು, ಹೊನ್ನಾವರ ತಾಲ್ಲೂಕಿನ ಹೆರಂಗಡಿ ಮಂಡಲ ಏನಿದೆ ಅದು ಮಾತ್ರ ಸ್ವಲ್ಪ ಹಣ ಖರ್ಚು ಮಾಡಿದೆ. ಇಲ್ಲಿಗೆ ೧ ಲಕ್ಷದ ೧೮೮೪ ರೂಪಾಯಿಗಳನ್ನು ಕೊಡಲಾಗಿತ್ತು. ಇವರೆಲ್ಲಿ ೯೭ ಸಾವಿರ ಮಾತ್ರ ಖರ್ಚು ಮಾಡಿದ್ದಾರೆ. ಆದರೆ ಬೇರೆ ಮಂಡಲಗಳಿಗಿಂತ ಹೆಚ್ಚು ಖರ್ಚು ಮಾಡಿದ್ದಾರೆ, ಉಳಿದ ಮಂಡಲಗಳಲ್ಲಿ ಕೊಟ್ಟಿರುವ ಹಣವನ್ನು ಪೂರ್ತಾ ಖರ್ಚು ಮಾಡಿಲ್ಲ. ಹಾಗೂ ಜನಗಳಿಗೆ ಸರಿಯಾದ ಸೇವೆ ಮಾತುವುದಕ್ಕೆ ಪ್ರಯತ್ನ ಮಾಡಿಲ್ಲ. ಈಗ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದರ ಬಗ್ಗೆ ಮುಂದಿನ ವರ್ಷ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯ್ಕ್.—ಯಾವ ಮಂಡಲಗಳಲ್ಲಿ ಕೊಟ್ಟಂತ ಹಣವನ್ನು ಖರ್ಚು ಮಾಡಿಲ್ಲವೋ, ಅಂಥ ಮಂಡಲಗಳಿಗೆ ಮುಂದಿನ ವರ್ಷಕ್ಕೂ ಕೂಡ ಅದೇ ಪ್ರಮಾಣದಲ್ಲಿ ಹಣ ಕೊಡುತ್ತೀರಾ ? ಅಥವಾ ಈಗ ಖರ್ಚು ಮಾಡಿರುವಷ್ಟೇ ಅವುಗಳ ಅವಶ್ಯಕತೆ ಎಂದು ಅಷ್ಟೇ ಹಣ ವನ್ನು ಕೊಟ್ಟರೆ ಒಳ್ಳೆಯದಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಮುಂದಿನ ವರ್ಷಕ್ಕೆ ಕೊಡತಕ್ಕ ಹಣ ಮುಂದಿನ ವರ್ಷ ಕೊಡುತ್ತೇವೆ. ಖರ್ಚು ಮಾಡದೇ ಉಳಿದಿರತಕ್ಕ ಹಣ ಸರ್ಕಾರಕ್ಕೆ ವಾಪಸ್ಸು ಬರುತ್ತದೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಕೇಂದ್ರ ಸರ್ಕಾರದಿಂದ ನೇರವಾಗಿ ಮಂಡಲ ಪಂಚಾಯ್ತಿಗಳಿಗೆ ಬರುವಂಥ ಹಣ ಪ್ರಧಾನರು, ಕಾರ್ಯದರ್ಶಿಗಳು ಹಾಗೂ ಇಂಜಿನಿಯರಿಂಗಳ ವಶದಲ್ಲಿರುತ್ತದೆ. ೧೦–೧೫ ಮಂಡಲಿಗಳಿಗೆ ಸೇರಿದಂತೆ ಸುಮಾರು ೫೦–೬೦ ಲಕ್ಷ ರೂಪಾಯಿಗಳು ಬರುತ್ತದೆ. ಶಾಸಕರಾದ ನಾವುಗಳು ಕೂಡ ತಾಲ್ಲೂಕು ಸಮಿತಿಯ ಅಧ್ಯಕ್ಷರುಗಳಾಗಿ ಇದನ್ನು ನೋಡಿದ್ದೇವೆ. ಹೀಗೆ ಬಂದಿರುವಂಥ ಹಣದಲ್ಲಿ ಶೇಕಡಾ ೫೦ ಭಾಗ ಕೂಡ ಖರ್ಚಾಗಿರುವುದಿಲ್ಲ. ಇದಕ್ಕೆ ಕಾರಣ ಮಂಡಲ ಪಂಚಾಯ್ತಿಯಲ್ಲಿ ಸರಿಯಾದ ಯೋಜನೆಗಳನ್ನು ರೂಪಿಸಿರುವುದಿಲ್ಲ. ಪಂಚಾಯ್ತಿಯಲ್ಲಿ ರೆಸ್ಪೂಲ್ಯೂಷನ್ ಆಗಬೇಕು, ಮಂಡಲದ ಪ್ರಧಾನರು ಮತ್ತು ಸದಸ್ಯರುಗಳಿಂದ ಒಗ್ಗಟ್ಟಿನಿಂದ ಇದ್ದು, ಹಳ್ಳಿಗೆ ಬೇಕಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವಂಥ ಯೋಜನೆಗಳನ್ನು ಮೊದಲು ರೂಪಿಸಬೇಕಾಗುತ್ತದೆ. ಇಂಥ ಒಂದು ವ್ಯವಸ್ಥೆ ಸರಿಯಾಗಿಲ್ಲದೇ ಇರುವುದರಿಂದ ಸರ್ಕಾರದಿಂದ ಬಂದಿರತಕ್ಕ ಹಣ ಖರ್ಚಾಗದೆ ಹಾಗೆಯೇ ಉಳಿಯುತ್ತದೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಸೂಕ್ತ ಗಮನಹರಿಸಿ, ಮಂಡಲ ಪಂಚಾಯ್ತಿಗಳಿಗೆ ಸರ್ಕಾರದಿಂದ ಬರತಕ್ಕ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುವುದಕ್ಕೆ ಬೇಕಾದ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಹುಣಸೂರು ತಾಲ್ಲೂಕಿನಲ್ಲಿ ೮–೧೦ ಲಕ್ಷ ರೂಪಾಯಿಗಳು ಕೂಡ ಖರ್ಚಾಗಿಲ್ಲವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಂಡಲ ಪಂಚಾಯ್ತಿಗಳಿಗೆ ಕೊಡತಕ್ಕ ಪೂರ್ತಿ ಹಣವನ್ನು ಖರ್ಚು ಮಾಡುವುದರಲ್ಲಿ ಒಹಳ ನ್ಯೂನತೆಗಳು ಇವೆ. ತಕ್ಷಣ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಕಾಮಗಾರಿಗಳನ್ನು ಮಾಡಬೇಕಾದರೆ, ಅಂದಾಜು ತಯಾರು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಸಿಬ್ಬಂದಿವರ್ಗವನ್ನು ಮಂಜೂರು ಮಾಡಬೇಕಾಗುತ್ತದೆ. ಇದನ್ನೆ ಮಂಜೂರು ಮಾಡಿದ ಮೇಲೆ ಈ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಈಗ ಸ್ವಲ್ಪ ತಡ ಆಗಿದೆ. ಅದರ ಜೊತೆಗೆ ಈಗ ಖರ್ಚು ಮಾಡುವ ಹಣ ಊರಿನ ಅಭಿವೃದ್ಧಿ, ಮತ್ತು ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕದ್ದಕ್ಕೆ ಖರ್ಚು ಮಾಡಬೇಕೆಂಬ ನಿಯಮ ಇದೆ. ಅವರಿಗೆ ಹಲವಾರು ಕಾರಣಗಳಿಂದ ಖರ್ಚು ಮಾಡಲಿಕ್ಕೆ ಆಗಿಲ್ಲ. ಸರ್ವೇಸಾಧಾರಣವಾಗಿ ಸಂಪತ್ತಭಿವೃದ್ಧಿ ಕಾರ್ಯಗಳ ಬಗ್ಗೆ ಮಂಡಲ್ ಪಂಚಾಯಿತಿನವರು ಏನು ಖರ್ಚು ಮಾಡುತ್ತಿದ್ದಾರೆ. ಅದರ ಜೊತೆಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಇದೆ. ಅದು ಒಡವರಿಗೋಸ್ಕರ ಖರ್ಚು ಮಾಡತಕ್ಕದ್ದು. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಖರ್ಚು ಮಾಡತಕ್ಕ ಹಣ, ಅದರಲ್ಲಿ ಶೇಕಡ ೫,೧೦,೧೫ರಷ್ಟು ಮಾತ್ರ ಖರ್ಚು ಮಾಡಲಿಕ್ಕೆ ಒಂದು ಪ್ರಯತ್ನ ನಡೆದಿದೆ ಆದ್ದರಿಂದ, ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮಂಡಲ್ ಪಂಚಾಯಿತಿಯಲ್ಲಿ ಇಂಥ ಒಂದು ವಿಶೇಷ ಘಟಕ ಯೋಜನೆಯ ಪ್ರಕಾರ ಒಡವರಿಗೆ ಸಲ್ಲತಕ್ಕ ಹಣವನ್ನು ಖರ್ಚು ಮಾಡಲಿಕ್ಕೆ ಅವರಿಗೆ ಏತಕ್ಕೆ ಮನಸ್ಸು ಬಂದಿಲ್ಲ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ ಮತ್ತು ಅದಕ್ಕೆ ನಾವು ಏನಾದರೂ ಒಂದು ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ತಮ್ಮ ಸಲಹೆಯನ್ನೂ ತೆಗೆದುಕೊಂಡು ಕಾರ್ಯಕ್ರಮಗಳನ್ನು ನಿರೂಪಿಸಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಚಿಂತಾಮಣಿ ಆಸ್ಪತ್ರೆಗಾಗಿ ಮಹಿಳಾ ವೈದ್ಯಾಧಿಕಾರಿ

೧೭೬. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಬಟ್ಲಹಳ್ಳಿ ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ನಿಜವೆ ?

ಆ) ಹಾಗಿದ್ದರೆ, ಸದರೀ ಆಸ್ಪತ್ರೆಗಳಲ್ಲಿ ಯಾವ ದಿನಾಂಕದಿಂದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ ?

ಇ) ಮಹಿಳಾ ವೈದ್ಯಾಧಿಕಾರಿಗಳಿಲ್ಲದೆ ನಾಗರೀಕರಿಗೆ ಅದರಲ್ಲೂ ಮಹಿಳೆಯರಿಗೆ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೇ ?

ಈ) ಹಾಗಿದ್ದ ಪಕ್ಷಕ್ಕೆ ಸದರೀ ಹುದ್ದೆಯನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮವೇನು ?